ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು

ಸಂಖ್ಯೆ:ಲಿಪಿಕ(1)/40/2020-21 ದಿನಾಂಕ: 6 .08.2020.

## -: ಸೂಚನೆ :-

ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು ಇವರ ಪತ್ರ ಸಂಖ್ಯೆ:ಪಿಎಸ್‌ಸಿಇ(2)/686-732/2020-21, ದಿನಾಂಕ:05-06-2020 ಕರ್ನಾಟಕ ಲೋಕಸೇವಾ ಆಯೋಗದಿಂದ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಆಯ್ಕೆಯಾಗಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಂಚಿಕೆಯಾಗಿರುವ ಅಭ್ಯರ್ಥಿಗಳ ಸಿಂಧುತ್ವ/ವಿದ್ಯಾರ್ಹತೆಯ ಪ್ರಮಾಣ ಪತ್ರ, ಕಲ್ಯಾಣ ಕರ್ನಾಟಕ ಮೀಸಲಾತಿ ಪ್ರಮಾಣ ಪತ್ರ, ಅಂಗವಿಕಲ ಪ್ರಮಾಣ ಪತ್ರ, ಮಾಜಿ ಸೈನಿಕರ ಮೀಸಲಾತಿಯ ಪ್ರಮಾಣ ಪತ್ರ, ಅಭ್ಯರ್ಥಿಗಳ ಪೂರ್ವಪರ ನಡೆತೆಯ ಬಗ್ಗೆ ಮಾಹಿತಿ ಮತ್ತು ಯೋಜನೆಗಳಿಂದ ನಿರ್ವಸಿತರಾದ ಕುಟುಂಬದ ಅಭ್ಯರ್ಥಿಗಳು ನೀಡಿರುವ ಪ್ರಮಾಣ ಪತ್ರಗಳ ನೈಜತೆಯ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರಗಳಿಂದ ವರದಿ ಪಡೆದು ನಂತರ ನೇಮಕಾತಿ ಆದೇಶ ಹೊರಡಿಸುವಂತೆ ಸೂಚಿಸಲಾಗಿರುತ್ತದೆ.

ಆದ್ದರಿಂದ ಈ ಕೆಳಕಂಡ ಪ್ರಾಧಿಕಾರಗಳಿಗೆ ಪತ್ರ ವ್ಯವಹಾರ ನಡೆಸಿರುವ ವಿವರ ಕೆಳಗಿನಂತ್ತಿದೆ. ಅಭ್ಯರ್ಥಿಗಳು ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ಸಂಪರ್ಕಿಸಿ ನಿಗಧಿತ ಶುಲ್ಕವೇನಾದರು ಇದ್ದಲ್ಲಿ ಪಾವತಿಸಿ ಕೋರಿರುವ ಮಾಹಿತಿಯನ್ನು ಸಕಾಲದಲ್ಲಿ ಈ ಕಛೇರಿಗೆ ತಲುಪಿಸಿದ್ದಲ್ಲಿ ನೇಮಕಾತಿ ಆದೇಶ ಹೊರಡಿಸಲು ನಿಯಾನುಸಾರ ಕ್ರಮ ಜರುಗಿಸಲಾಗುವುದು.

| ಕ್ರ.ಸಂ | ಪತ್ರ ವ್ಯವರಿಸಲಾಗಿರುವ ಪ್ರಾಧಿಕಾರ | ವಿಷಯ | ದಿನಾಂಕ |
|---|---|---|---|
| 1. | The Brigediar, Department of Saink Welfare and Resettlement, Bangalore | ಮಾಜಿ ಸೈನಿಕರು ಸಲ್ಲಿಸಿರುವ ಪ್ರಮಾಣ ಪತ್ರಗಳ ನೈಜತೆಯ ಬಗ್ಗೆ | 22.07.2020 |
| 2. | ಸಂಬಂಧಪಟ್ಟ ವಿಶ್ವವಿದ್ಯಾಲಯಗಳಿಗೆ | ಹುದ್ದೆಗೆ ನಿಗಧಿತ ವಿದ್ಯಾರ್ಹತೆಯ ಪ್ರಮಾಣ ಪತ್ರಗಳ ನೈಜತೆಯ ಬಗ್ಗೆ | 22.07.2020 |
| 3. | ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು | ಅಭ್ಯರ್ಥಿಗಳ ಪೂರ್ವಪರ ನಡೆತೆಯ ಮಾಹಿತಿ ಪಡೆಯಲು | 27.07.2020 |
| 4. | ತಹಶಿಲ್ದಾರ್ | ಯೋಜನಾ ನಿರ್ವಸಿತ ಅಭ್ಯರ್ಥಿಗಳು ನೀಡಿರುವ ಪ್ರಮಾಣ ಪತ್ರದ ನೈಜತೆಯ ಬಗ್ಗೆ | 27.07.2020 |
| 5. | ಅಧ್ಯಕ್ಷಕರು, ವೈದ್ಯಕೀಯ ಮಂಡಳಿ | ಅಂಗವಿಕಲ ಪ್ರಮಾಣ ಪತ್ರದ ನೈಜತೆಯ ಬಗ್ಗೆ | 01.08.2020 |
| 6. | ಮಾನ್ಯ ಜಿಲ್ಲಾಧಿಕಾರಿಗಳು, | ಸಿಂಧುತ್ವ ಪ್ರಮಾಣ ಪತ್ರದ ನೈಜತೆಯ ಬಗ್ಗೆ | 03.08.2020 |
| 7. | ಮಾನ್ಯ ಜಿಲ್ಲಾಧಿಕಾರಿಗಳಿಗೆ | ಕಲ್ಯಾಣ ಕರ್ನಾಟಕ 371(ಜೆ) ಪ್ರಮಾಣ ಪತ್ರದ ನೈಜತೆಯ ಬಗ್ಗೆ | 03.08.2020 |

6/8

ಮುಖ್ಯ ಆಡಳಿತಾಧಿಕಾರಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,
ಬೆಂಗಳೂರು.